# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡವಳಿಗಳು

47

| ವಾದಿಗಳು: | ಪ್ರತಿವಾದಿಗಳು: |
|---|---|
| ಶ್ರೀ ಜಿ ಎಂ ಶಿವಕುಮಾರ್ ತಾಯಿ ಜಿ ಎಂ ಲಲಿತಮ್ಮ | ಶ್ರೀಮತಿ ಸರಸ್ವತಿ ಪಾಟೀಲ್ ಗಂಡ ತಿಪ್ಪನಗೌಡ |

**ವಿಷಯ:**-ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿಯ ಕೊಳಗಲ್ಲು ಗ್ರಾಮದ ಸರ್ವೆ ನಂ:429 ಪೈಕಿ ವಿಸ್ತೀರ್ಣ:0.49.45.00 ಸೇಂಟ್ಸ್ ಜಮೀನಿಗೆ ಸಂಬಂಧಿಸಿದಂತೆ ವಿಚಾರಣೆ ಕುರಿತು.

*********

ಪ್ರಸ್ತಾವನೆ:

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿಯ ಕೊಳಗಲ್ಲು ಗ್ರಾಮದ ಸರ್ವೆ ನಂ:429 ಪೈಕಿ ವಿಸ್ತೀರ್ಣ:0.49.45.00 ಸೇಂಟ್ಸ್ ಜಮೀನಿ ಹಾಲಿ ಭೂಮಾಲಿಕರಾದ ಶ್ರೀಮತಿ ಸರಸ್ವತಿ ಪಾಟೀಲ್ ಗಂಡ ತಿಪ್ಪನಗೌಡ ಇವರು ಉಪನೊಂದಾಣೆ ಅಧಿಕಾರಿಗಳು ಬಳ್ಳಾರಿ ಇವರ ಸಂಖ್ಯೆ: BLY-1-09697/2015-16 ದಿನಾಂಕ:04-11-2015ರ ಪ್ರಕಾರ ಶ್ರೀ ಜಿ ಎಂ ಶಿವಕುಮಾರ್ ತಾಯಿ ಜಿ ಎಂ ಲಲಿತಮ್ಮ ಇವರಿಗೆ ಖರೀದಿಗೆ ಮಾರಟ ಮಾಡಿರುತ್ತಾರೆ. ಅದರಂತೆ ಖರೀದಿದಾರರು ಹಕ್ಕುಬದಲಾವಣೆ ಮಾಡಲು ಮನವಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರ ಮನವಿಯಂತೆ ಕಂದಾಯ ನಿರೀಕ್ಷಕರು, ಬಳ್ಳಾರಿ ಇವರು ಗ್ರಾಮದಲ್ಲಿ ನಮೂನೆ-21ನ್ನು ಜಾರಿಮಾಡಿರುತ್ತಾರೆ ನಿಗದಿತ ಅವದಿಯಲ್ಲಿ ಶ್ರೀಮತಿ ಸರಸ್ವತಿ ಪಾಟೀಲ್ ಗಂಡ ತಿಪ್ಪನಗೌಡ ಇವರಿಂದ ಹಕ್ಕುಬದಲಾವಣೆ ಮಾಡದಂತೆ ತಕಾರರು ಮನವಿಯನ್ನು ಸಲ್ಲಿಸಿರುತ್ತಾರೆ. ಕಾರಣ ಕಂದಾಯ ನಿರೀಕ್ಷಕರು, ಬಳ್ಳಾರಿ ಇವರು ಸದ್ರಿ ಕಡತವನ್ನು ತಿರಸ್ಕರಿಸಿ ಇತ್ಯರ್ಥ ಪಡೆಸಲು ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣವನ್ನು ಇತ್ಯರ್ಥ ಪಡಿಸಲು ದಿನಾಂಕ21-03-2016, 04-04-2016, ಮತ್ತು 23-05-2016 ರಂದು ವಿಚಾರಣೆ ನಡೆಸಲಾಗಿ ವಾದಿಗಳು ಪ್ರಕರಣಕ್ಕೆ ಹಾಜರಾಗಿ. ಪ್ರತಿವಾದಿಗಳು ಹಾಜರಾಗಿ ಹಕ್ಕು ಬದಲಾವಣೆ ಮಾಡಲು ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಅಪಿಡೆವಿಟ್ ನೀಡಿರುತ್ತಾರೆ ಕಾರಣ ಈ ಕೆಳಗಿನಂತೆ ಆದೇಶ.

-::ಆದೇಶ::-

ಸಂ/ಕಂ/ವಿವಾದ/69/2015-16 ದಿನಾಂಕ: 6/6/2016

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿಯ ಕೊಳಗಲ್ಲು ಗ್ರಾಮದ ಸರ್ವೆ ನಂ:429 ಪೈಕಿ ವಿಸ್ತೀರ್ಣ:0.49.45.00 ಸೇಂಟ್ಸ್ ಜಮೀನನ್ನು ಉಪನೊಂದಾಣೆ ಅಧಿಕಾರಿಗಳು ಬಳ್ಳಾರಿ ಇವರ ಸಂಖ್ಯೆ: BLY-1-09697/2015-16 ದಿನಾಂಕ:04-11-2016ರ ಪ್ರಕಾರ ಶ್ರೀ ಜಿ.ಎಂ ಶಿವಕುಮಾರ್ ತಾಯಿ ಜಿ.ಎಂ ಲಲಿತಮ್ಮ ಇವರ ಹೆಸರಿಗೆ ಕ್ರಯ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವು ಇಂದು ದಿನಾಂಕ:6.6.2016ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಬಳ್ಳಾರಿ

ತಹಶೀಲ್ದಾರರು, ಬಳ್ಳಾರಿ
Tasildar, Bellary.

ಪ್ರತಿಯನ್ನು:

1.ವಾದಿಗಳು

2.ಶಿರಸ್ತೇದಾರರು ಭೂಮಿ ಗಣಿಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.

3.ಆದೇಶದ ಕಡತಕ್ಕೆ